6-3-2025
20

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ (ಪಶ್ಚಿಮ ಪದವೀಧರರ ಕ್ಷೇತ್ರ)**
**ಇವರ ಶೂನ್ಯವೇಳೆ ಪ್ರಸ್ತಾಪಕ್ಕೆ ಸರ್ಕಾರದ ಉತ್ತರ.**
**(ದಿನಾಂಕ: 05.03.2025, ಕ್ರಮ ಸಂಖ್ಯೆ-11)**

**ವಿಷಯ:-**

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇದರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲ, ಹಾಗಾಗಿ ಮುಂದಿನ ತಿಂಗಳು ಅಂದರೆ ಮಾರ್ಚ್1ರ ತಿಂಗಳಲ್ಲಿ ನಿವೃತ್ತಿ ನೌಕರರಿಗೆ ಪಿಂಚಣಿ ನೀಡಲು ಸಾಧ್ಯವಾಗುತ್ತಿಲ್ಲವೆಂದು ಪ್ರಭಾರಿ ಕುಲಪತಿಗಳೂ ಹಾಗೂ ಹಣಕಾಸು ಅಧಿಕಾರಿಗಳ ಹೇಳಿಕೆ ನೀಡಿದ್ದ ವಿಷಯವು ವಿಜಯವಾಣಿ, ಪ್ರಜಾವಾಣಿ, ಕನ್ನಡ ಪ್ರಭ, ವಿಜಯ ಕರ್ನಾಟಕ, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ವರದಿಯಾಗಿರುವುದು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸುಮಾರು 1800 ಜನ ನಿವೃತ್ತ ನೌಕರರು ಇದ್ದು, ಪ್ರತಿ ತಿಂಗಳು ರೂ 8 ರಿಂದ 9ಕೋಟಿಯಂತೆ ವಾರ್ಷಿಕ ರೂ126 ಕೋಟಿ ಪಿಂಚಣಿಗಾಗಿ ಬೇಕಾಗಿರುವುದು. ಆದರೆ ಸರ್ಕಾರ ಪ್ರಸ್ತುತ ವರ್ಷ ರೂ 70 ಕೋಟಿ ಮಾತ್ರ ಬಿಡುಗಡೆ ಮಾಡಿದೆ. ಉಳಿದ ಹಣವನ್ನು ಕ.ವಿ.ವಿ. ಆಂತರಿಕ ಸಂಪನ್ಮೂಲಗಳಿಂದ ಕ್ರೋಢಿಕರಿಸಿ ಇಲ್ಲಿಯವರೆಗೆ ಪಿಂಚಣಿಯನ್ನು ನೀಡುತ್ತಾ ಬಂದಿದೆ. ಆದರೆ ವಿಶ್ವವಿದ್ಯಾಲಯದಲ್ಲಿ ಹಣದ ಕೊರತೆ ಇರುವುದರಿಂದ ಮುಂದಿನ ತಿಂಗಳೂ ಮಾರ್ಚ್ 1ಕ್ಕೆ ನೀಡಬೇಕಾದ ಪಿಂಚಣಿಯನ್ನು ನೀಡಲು ಸಾಧ್ಯವಿಲ್ಲವೆಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿರುವರು. ಈ ಕುರಿತು ನಿವೃತ್ತ ನೌಕರರ ಸಂಘ ಪ್ರತಿಭಟನೆ ಮಾಡಿ ಪಿಂಚಣಿ ವೇತನ ಬಿಡುಗಡೆ ಮಾಡಲು ಕುಲಪತಿಗಳಿಗೆ ಮನವಿ ಸಲ್ಲಿಸಿ ಒತ್ತಾಯ ಮಾಡಿದ್ದುಂಟು. ಆದ್ದರಿಂದ ಸರ್ಕಾರ ಕೂಡಲೆ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾಪದ ಕುರಿತು.

**ಉತ್ತರ:-**

ಕರ್ನಾಟಕ ವಿಶ್ವವಿದ್ಯಾಲಯಕ್ಕೆ 2024-25ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಈಗಾಗಲೇ ವಿಶ್ರಾಂತಿ ವೇತನಕ್ಕೆ ರೂ.50.00ಕೋಟಿಗಳನ್ನು ಒದಗಿಸಲಾಗಿದೆ. ಈ ಅನುದಾನವನ್ನು ನಾಲ್ಕು ಕಂತುಗಳನ್ನು ಬಿಡುಗಡೆಗೊಳಿಸಲಾಗಿದ್ದು, ಅದರ ವಿವರ ಕೆಳಕಂಡಂತಿದೆ:-

(ರೂ.ಕೋಟಿಗಳಲ್ಲಿ)

| ಕ್ರ. ಸಂ | ವಿಶ್ವವಿದ್ಯಾಲಯ ಹೆಸರು/ಪ್ರಧಾನ ಶೀರ್ಷಿಕೆ | ಪ್ರಥಮ ಕಂತು ದಿನಾಂಕ: 04.04.2024 | ದ್ವಿತೀಯ ಕಂತು ದಿನಾಂಕ: 25.06.2024 | ತೃತೀಯ ಕಂತು ದಿನಾಂಕ: 05.09.2024 | ನಾಲ್ಕನೇ ಕಂತು ದಿನಾಂಕ: 02.12.2024 |
|---|---|---|---|---|---|
| 1 | ಕರ್ನಾಟಕ ವಿಶ್ವವಿದ್ಯಾಲಯ 2202-03-102-0-02-118-ಸಹಾಯಾನುದಾನ ವಿಶ್ರಾಂತಿ ವೇತನಗಳು | 12.50 | 12.50 | 12.50 | 12.50 |

ಮುಂದುವರೆದು, 2024-25ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪಿಂಚಣಿ ವೇತನ ಪಾವತಿಗಾಗಿ ಲೆಕ್ಕ ಶೀರ್ಷಿಕೆ:2202-03-102-0-02-118-ಸಹಾಯಾನುದಾನ-ವಿಶ್ರಾಂತಿ ವೇತನಗಳು ಅಡಿಯಲ್ಲಿ ರೂ.20.00 ಕೋಟಿಗಳನ್ನು ಪುನರ್ವಿನಿಯೋಗದ ಮೂಲಕ ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸಿ ದಿನಾಂಕ: 29.11.2024ರಂದು ಆದೇಶಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲದ ಶೇ.65%ಕ್ಕೂ ಹೆಚ್ಚು ಮೊತ್ತವನ್ನು (ರೂ.46ಕೋಟಿ) ಅತಿಥಿ ಉಪನ್ಯಾಸಕರು/ಹೊರಗುತ್ತಿಗೆ/ತಾತ್ಕಾಲಿಕ/ಬೋಧಕೇತರ ಸಿಬ್ಬಂದಿಯ ವೇತನ/ಕಛೇರಿ ನಿರ್ವಹಣೆಗಾಗಿ ವೆಚ್ಚ ಮಾಡುತ್ತಿದ್ದು, ಇದು ಅಸಮಾನವಾಗಿ disproportionately high) ಹೆಚ್ಚಾಗಿರುತ್ತದೆ. ಈ ಹಿನ್ನಲೆಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯವು ಅಸಮಾನ ವೆಚ್ಚವನ್ನು ತರ್ಕಬದ್ಧಗೊಳಿಸುವ ಅನಗತ್ಯ ವೆಚ್ಚವನ್ನು ನಿಯಂತ್ರಿಸಲು ಮೊದಲಿಗೆ ಜರೂರು ಕ್ರಮವಹಿಸಬೇಕಾಗಿರುತ್ತದೆ.

ಅಲ್ಲದೇ, ಆರ್ಥಿಕ ಇಲಾಖೆಯು ಮಂಗಳೂರು ವಿಶ್ವವಿದ್ಯಾಲಯದ ಹೆಚ್ಚುವರಿ ಪಿಂಚಣಿ ಕೋರಿಕೆಗೆ ಸಂಬಂಧಿಸಿದಂತೆ ನೀಡಿರುವ ಅಭಿಪ್ರಾಯದನ್ವಯ ಕರ್ನಾಟಕ ವಿಶ್ವವಿದ್ಯಾಲಯವು ಅವಶ್ಯಕವಲ್ಲದ ಖರ್ಚುಗಳಿಗೆ ಅನುದಾನ ಪಾವತಿಸುವುದನ್ನು ಹೊರತುಪಡಿಸಿ ಇನ್ನು ಮುಂದೆ ತನ್ನ ಆಂತರಿಕ ಸಂಪನ್ಮೂಲಗಳಿಂದ ಶಾಸನಬದ್ಧ ಹೊಣೆಗಾರಿಕೆಗಳ (ಪಿಂಚಣಿ ಇತ್ಯಾದಿ) ವೆಚ್ಚಗಳನ್ನು ಪಾವತಿಸಲು ಪ್ರಥಮದಲ್ಲಿ ಅವಕಾಶ ಕಲ್ಪಿಸಿಕೊಂಡು, ತದನಂತರವೇ ಶಾಸನಬದ್ಧವಲ್ಲದ/ಇತರೆ ಹೆಚ್ಚುವರಿ ವೆಚ್ಚಗಳಿಗೆ ಅವಕಾಶ ಮಾಡಿಕೊಳ್ಳಬೇಕಾಗಿರುತ್ತದೆ.

ಸಂಖ್ಯೆ: ಇಡಿ 55 ಹೆಚ್‌ಪಿಯು 2025)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು.